**ದಿನಾಂಕಃ 05.12.2018 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂಪಿ ವಕೀಲರಿಂದಃ-**

ನಿಪಿ-27 ಪ್ರೌಢಶಾಲೆಯಿಂದ ಪಡೆದ ದಾಖಲಾತಿ ದೃಢೀಕರಣ ಪತ್ರ ಎಂದರೆ ಸರಿ. ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ವಿವರ ಎಲ್ಲಾ ಶಾಲಾ ದಾಖಲೆಗಳಲ್ಲಿ ಮುಂದುವರೆಯುತ್ತದೆ ಎಂದರೆ ಸರಿ. ನಿಪಿ-27 ರಲ್ಲಿ 2ನೇ ಪ್ರತಿವಾದಿಯವರ ತಂದೆಯ ಹೆಸರು ವೆಂಕಟೇಗೌಡ ಎಂದು ನಮೂದಿದೆ ಎಂದರೆ ಸರಿ. ನಂತರದಲ್ಲಿ 2ನೇ ಪ್ರತಿವಾದಿಯನ್ನು ಶಿವರಾಮೇಗೌಡ ದತ್ತು ಪಡೆದಿರುತ್ತಾರೆಂದರೆ ಸರಿಯಲ್ಲ. ಆದರೆ 2ನೇ ಪ್ರತಿವಾದಿಯ ಶಾಲಾ ದಾಖಲೆಗಳು ಹಿಂದಿನಂತೆ ಮುಂದುವರೆದಿರುತ್ತವೆ ಎಂದರೆ ಸರಿಯಲ್ಲ. ಸದರಿ ಶಿವರಾಮೇಗೌಡ 2ನೇ ಪ್ರತಿವಾದಿ ಹೆಸರಿಗೆ ಬರೆದಿರುವ ಮರಣ ಶಾಸನವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಯೇ ಎಂದರೆ ಸಾಕ್ಷಿ ಆತ ಯಾವುದೇ ವಿಲ್ ಬರೆದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಲ್‌ನಲ್ಲಿ 2ನೇ ಪ್ರತಿವಾದಿಯನ್ನು ದತ್ತು ಪಡೆದ ಬಗ್ಗೆ ನಮೂದಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕೊಳ್ಳೇಗಾಲ.